ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೪ಎ Part – IVA	ಬೆಂಗಳೂರು, ಗುರುವಾರ, ೨೧ ಆಗಸ್ಟ್, ೨೦೨೫ (ಶ್ರಾವಣ ೩೦, ಶಕವರ್ಷ ೧೯೪೭) BENGALURU, THURSDAY, 21 AUGUST, 2025 (SHRAVANA 30, SHAKAVARSHA 1947)	ನಂ. ೪೯೬ No. 496

ಕರ್ನಾಟಕ ವಿಧಾನಸಭೆ

ಹದಿನಾರನೇ ವಿಧಾನಸಭೆ

ಏಳನೇ ಅಧಿವೇಶನ

ಕರ್ನಾಟಕ ಜನಸಂದಣಿ ನಿಯಂತ್ರಣ (ಕಾರ್ಯಕ್ರಮಗಳು ಮತ್ತು ಗುಂಪುಗೂಡುವ ಸ್ಥಳಗಳಲ್ಲಿ ಜನಸಂದಣಿಯ ನಿರ್ವಹಣೆ) ವಿಧೇಯಕ, 2025

(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–63)

ಕಾನೂನುಬಾಹಿರವಾಗಿ ಗುಂಪುಗೂಡುವುದನ್ನು ಪ್ರತಿಬಂಧಿಸಲು ಮತ್ತು ಅಪರಾಧಗಳ ದಂಡನೆಗಾಗಿ ಉಪಬಂಧಗಳನ್ನು ಕಲ್ಪಿಸಲು, ಕಾರ್ಯಕ್ರಮಗಳು ಮತ್ತು ಸಮಾರಂಭಗಳಲ್ಲಿ ಜನಸಂದಣಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವುದಕ್ಕಾಗಿ ಮತ್ತು ಸಮೂಹ ಗುಂಪುಗೂಡುವಿಕೆಯನ್ನು ನಿರ್ವಹಿಸುವುದಕ್ಕಾಗಿ ಒಂದು ವಿಧೇಯಕ.

ಕಾನೂನುಬಾಹಿರವಾಗಿ ಗುಂಪುಗೂಡುವುದನ್ನು ಪ್ರತಿಬಂಧಿಸಲು ಮತ್ತು ಅಪರಾಧಗಳ ದಂಡನೆಗಾಗಿ ಉಪಬಂಧಗಳನ್ನು ಕಲ್ಪಿಸಲು, ಕಾರ್ಯಕ್ರಮಗಳು ಮತ್ತು ಸಮಾರಂಭಗಳಲ್ಲಿ ಜನಸಂದಣಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವುದಕ್ಕಾಗಿ ಮತ್ತು ಸಮೂಹ ಗುಂಪುಗೂಡುವಿಕೆಯನ್ನು ನಿರ್ವಹಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧಗಳನ್ನು ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಜನಸಂದಣಿ ನಿಯಂತ್ರಣ (ಕಾರ್ಯಕ್ರಮಗಳು ಮತ್ತು ಗುಂಪುಗೂಡುವ ಸ್ಥಳಗಳಲ್ಲಿ ಜನಸಂದಣಿಯ ನಿರ್ವಹಣೆ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಿದ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು.- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(i) "ಅರ್ಜಿ" ಎಂದರೆ ಕರ್ನಾಟಕ ಸರ್ಕಾರವು ಅಧಿಸೂಚಿಸಿದಂತೆ ನಿಯಮಿಸಲಾದ ನಮೂನೆಯಲ್ಲಿನ ಕೋರಿಕೆ;

(ii) "ನಾಗರಿಕ ತೊಂದರೆ" ಎಂಬುದು ಶಾಂತಿಯನ್ನು ಉಲ್ಲಂಘಿಸಿ ಮಾಡಲಾಗುವ ಜನರ ಗುಂಪುಗೂಡುವಿಕೆ ಅಥವಾ ಸಾಮೂಹಿಕ ಹಿಂಸೆಯ ಬೆದರಿಕೆ, ಸ್ವತ್ತಿನ ಹಾನಿ ಅಥವಾ ಇತರ ಕಾನೂನುಬಾಹಿರ ಕೃತ್ಯದಲ್ಲಿ ವ್ಯಕ್ತಿಗಳ ಗುಂಪು ಸೇರುವಿಕೆಯನ್ನು ಒಳಗೊಳ್ಳುವುದು;

(iii) "ಜನಸಂದಣಿ" ಎಂಬುದು ಸಾಮಾನ್ಯ ಉದ್ದೇಶ ಅಥವಾ ಗುರಿಗಾಗಿ ಗುಂಪುಗೂಡಿದ ಐದು ಸಾವಿರ ಅಥವಾ ಅದಕ್ಕಿಂತ ಹೆಚ್ಚಿನ ಜನರ ಗುಂಪನ್ನು ಒಳಗೊಳ್ಳುವುದು;

(iv) "ಜನಸಂದಣಿ ನಿಯಂತ್ರಣ" ಎಂಬುದು, ಕಾನೂನು ಮತ್ತು ಸುವ್ಯವಸ್ಥೆಯನ್ನು ನಿರ್ವಹಿಸಲು ಕಾನೂನು ಜಾರಿ ಏಜೆನ್ಸಿಗಳು ಬಳಸುವ ವಿಧಾನಗಳು, ಕಾರ್ಯವಿಧಾನಗಳು ಮತ್ತು ಕಾರ್ಯತಂತ್ರಗಳನ್ನು ಒಳಗೊಳ್ಳುವುದು.

ವಿವರಣೆ:- ಈ ಖಂಡದ ಉದ್ದೇಶಕ್ಕಾಗಿ ಜನಸಂದಣಿ ನಿಯಂತ್ರಣವು ಬಲಪ್ರದರ್ಶನದ ಕಾರ್ಯಗಳು, ಜನಸಂದಣಿ ಹತೋಟಿ, ಗುಂಪು ಚದುರಿಸುವ ಕಾರ್ಯತಂತ್ರಗಳು, ಮತ್ತು ಹೆಚ್ಚಿನ ಜನರ ಬಂಧನಗಳಿಗಾಗಿ ಸಿದ್ಧತೆಗಳನ್ನು ಒಳಗೊಳ್ಳುವುದು;

(v) "ಜನಸಂದಣಿಯ ನಿರ್ವಹಣೆ" ಎಂಬುದು ಕಾರ್ಯಕ್ರಮ ಯೋಜನೆ, ಕಾರ್ಯಕ್ರಮದ ಪೂರ್ವದಲ್ಲಿ ಕಾರ್ಯಕ್ರಮ ಆಯೋಜಕರೊಂದಿಗೆ ಸಂಪರ್ಕ, ಅನ್ವಯವಾಗುವಲ್ಲಿ ಅನುಮತಿಗಳ ನೀಡುವಿಕೆ, ಮಾಹಿತಿ ಸಂಗ್ರಹಣೆ ಮತ್ತು ಇತರ ವಿಧಾನಗಳ ಮೂಲಕ ಕಾನೂನುಬದ್ಧ ಸ್ಥಿತಿಗತಿಯನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಕಾರ್ಯಕ್ರಮದ ಮೊದಲು, ನಡೆಯುವ ವೇಳೆ ಮತ್ತು ನಂತರದಲ್ಲಿನ ಕಾನೂನುಬದ್ಧ ಗುಂಪು ಸೇರುವಿಕೆಯನ್ನು ನಿರ್ವಹಿಸಲು ಬಳಸುವ ಕಾರ್ಯತಂತ್ರಗಳನ್ನು ಒಳಗೊಳ್ಳುವುದು;

(vi) "ಜನಸಂದಣಿಯ ವಿಪತ್ತು" ಗ್ರಹಿತ ಅಪಾಯ ಅಥವಾ ಭೌತಿಕ ಸ್ಥಳಾವಕಾಶದ ಕೊರತೆ ಅಥವಾ ಜನಸಂದಣಿಯ ಕ್ರಮಬದ್ಧ ಚಲನೆಯಲ್ಲಿ ಅಡ್ಡಿಪಡಿಸುವಿಕೆಯ ಪ್ರತಿಕ್ರಿಯೆಯಾಗಿ, ಜನದಟ್ಟಣೆಯಲ್ಲಿನ ಜನ ಪ್ರವಾಹದಿಂದಾದ ನೂಕುನುಗ್ಗಲಿನಿಂದ ಸ್ವಯಂ-ರಕ್ಷಣೆ ಪಡೆಯಲು ಉಂಟಾಗುವ ಅಸಂಬದ್ಧ ಮತ್ತು ಅಪಾಯಕಾರಿ ಚಲನೆಗಳ ಪರಿಣಾಮವಾಗಿ ಸಂಭವಿಸುವ ದೈಹಿಕಗಾಯಗಳು (injuries) ಮತ್ತು ಸಾವು ನೋವುಗಳನ್ನು ಒಳಗೊಳ್ಳುವುದು;

(vii) "ಸಮಾರಂಭ ಅಥವಾ ಕಾರ್ಯಕ್ರಮ" ಎಂಬುದು ಸಾಮಾನ್ಯ ಉದ್ದೇಶಕ್ಕಾಗಿ ನಿರ್ದಿಷ್ಟ ಸ್ಥಳವೊಂದರಲ್ಲಿ ಆ ಸಾಮಾನ್ಯ ಉದ್ದೇಶವನ್ನು ಪೂರೈಸಲು ಗುಂಪುಗೂಡುವ, ಯಾವುದೇ ಹೆಸರಿನಿಂದ ಕರೆಯಲಾಗುವ ಭಾರಿ ಸಂಖ್ಯೆಯ ಜನರ ಜಮಾವಣೆಯನ್ನು ಒಳಗೊಳ್ಳುವುದು;

(viii) "ಆಯೋಜಕರು" ಎಂಬುದು ಅಂಥ ಕಾರ್ಯಕ್ರಮ ಅಥವಾ ಸಮಾರಂಭವನ್ನು ಆಯೋಜಿಸಲು ಉದ್ದೇಶಿಸಿರುವ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು ಅಥವಾ ಕಂಪನಿಯನ್ನು ಒಳಗೊಳ್ಳುವುದು.

ವಿವರಣೆ: ಈ ಖಂಡದ ಉದ್ದೇಶಕ್ಕಾಗಿ "ಕಂಪನಿ" ಎಂದರೆ ಚಾಲ್ತಿಯಲ್ಲಿರುವ ಕಾನೂನುಗಳಡಿ ನೋಂದಾಯಿಸಲಾದ ಅಥವಾ ನೋಂದಾಯಿಸದಿರುವ ವ್ಯಕ್ತಿಗಳ ಸಂಘ; ಮತ್ತು

(ix) "ಗುಂಪುಗೂಡುವ ಸ್ಥಳ" ಎಂಬುದು ಪ್ರಾಧಿಕಾರಿಯ ಮೂಲಕ ಉದ್ದೇಶಿತ ಕಾರ್ಯಕ್ರಮ ಅಥವಾ ಸಮಾರಂಭವನ್ನು ಆಯೋಜಿಸಲು ಅನುಮತಿಸಲಾದ ಬಹಿರಂಗವಾಗಿರುವ ಅಥವಾ ಆವೃತವಾಗಿರುವ (closed) ಪ್ರದೇಶವನ್ನು ಒಳಗೊಳ್ಳುವುದು

3. ಜನಸಂದಣಿ ನಿಯಂತ್ರಣ ಮತ್ತು ನಿರ್ವಹಣೆಯ ಪ್ರಾಧಿಕಾರಿ.- ಪೊಲೀಸ್ ಠಾಣೆಯ ಉಸ್ತುವಾರಿ ಅಧಿಕಾರಿ ಮತ್ತು ಅದಕ್ಕಿಂತ ಮೇಲಿನ ದರ್ಜೆಯ ಪೊಲೀಸ್ ಅಧಿಕಾರಿಗಳು, ಅವರ

ಅಧಿಕಾರವ್ಯಾಪ್ತಿಯೊಳಗಿನ ಜನಸಂದಣಿ ನಿಯಂತ್ರಣ ಮತ್ತು ನಿರ್ವಹಣೆಯ ಪ್ರಾಧಿಕಾರಿಯಾಗಿರುವರು.

4. ಕಾರ್ಯಕ್ರಮಗಳು ಅಥವಾ ಸಮಾರಂಭಗಳನ್ನು ಆಯೋಜಿಸಲು ಅನುಮತಿ.- ಜನ ಗುಂಪುಗೂಡುವ ಅಥವಾ ಜನಸಂದಣಿಗೆ ಕಾರಣವಾಗುವ ಯಾವುದೇ ಕಾರ್ಯಕ್ರಮ ಅಥವಾ ಸಮಾರಂಭವನ್ನು ಆಯೋಜಿಸಲು ಉದ್ದೇಶಿಸಿರುವ ಯಾರಾದರೂ, ಆ ಪ್ರದೇಶದ ಅಧಿಕಾರವ್ಯಾಪ್ತಿಯ ಪ್ರಾಧಿಕಾರಿಯಿಂದ ಅನುಮತಿಯನ್ನು ಪಡೆಯತಕ್ಕದ್ದು,-

(ಎ) ಜನಸಂದಣಿಯು ಏಳು ಸಾವಿರಕ್ಕಿಂತ ಕಡಿಮೆಯಿದ್ದಾಗ, ಪೊಲೀಸ್ ಠಾಣೆಯ ಉಸ್ತುವಾರಿ ಅಧಿಕಾರಿಯು, ಆಯೋಜಕರ ಅರ್ಜಿಯ ಮೇರೆಗೆ ಸೂಕ್ತ ವಿಚಾರಣೆಯ ತರುವಾಯ ಅನುಮತಿಯನ್ನು ನೀಡಬಹುದು.

(ಬಿ) ಜನಸಂದಣಿಯು ಏಳು ಸಾವಿರಕ್ಕಿಂತ ಹೆಚ್ಚಾಗಿದ್ದು, ಆದರೆ ಐವತ್ತು ಸಾವಿರಕ್ಕಿಂತ ಕಡಿಮೆಯಿದ್ದಾಗ, ಆ ಅಧಿಕಾರವ್ಯಾಪ್ತಿಯಲ್ಲಿನ ಪೊಲೀಸ್ ಉಪ ಅಧೀಕ್ಷಕರು, ಆಯೋಜಕರ ಅರ್ಜಿಯ ಮೇರೆಗೆ ಸೂಕ್ತ ವಿಚಾರಣೆಯ ತರುವಾಯ ಅನುಮತಿಯನ್ನು ನೀಡಬಹುದು.

(ಸಿ) ಜನಸಂದಣಿಯು ಐವತ್ತು ಸಾವಿರಕ್ಕಿಂತ ಹೆಚ್ಚಿದ್ದಾಗ, ಆ ಅಧಿಕಾರವ್ಯಾಪ್ತಿಯಲ್ಲಿನ ಪೊಲೀಸ್ ಅಧೀಕ್ಷಕ ಅಥವಾ ಪೊಲೀಸ್ ಆಯುಕ್ತರು, ಆಯೋಜಕರ ಅರ್ಜಿಯ ಮೇರೆಗೆ ಸೂಕ್ತ ವಿಚಾರಣೆಯ ತರುವಾಯ ಅನುಮತಿಯನ್ನು ನೀಡಬಹುದು.

5. ಅನುಮತಿಗಾಗಿ ಅರ್ಜಿ.- (1) ಕಾರ್ಯಕ್ರಮ ಅಥವಾ ಸಮಾರಂಭದ ಆಯೋಜಕರು ಉದ್ದೇಶಿತ ಕಾರ್ಯಕ್ರಮ ಅಥವಾ ಸಮಾರಂಭದ ಹತ್ತು ದಿನಗಳಿಗೆ ಮೊದಲು ಕಾರ್ಯಕ್ರಮ ಅಥವಾ ಸಮಾರಂಭದ ಪೂರ್ಣ ವಿವರಗಳೊಂದಿಗೆ ಪ್ರಾಧಿಕಾರಿಗೆ ಅನುಮತಿಗಾಗಿ ಲಿಖಿತದಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ಅಂಥ ಕಾರ್ಯಕ್ರಮ ಸ್ಥಳದ ಒಳಗೆ ಮತ್ತು ಹೊರಗೆ ಗುಂಪುಗೂಡಿದ ಜನಸಂದಣಿಯ ಸುಗಮ ಸಂಚಾರಕ್ಕಾಗಿ ಅಳವಡಿಸಿಕೊಂಡ ಕ್ರಮಗಳನ್ನು ಆಯೋಜಕರು ಒದಗಿಸಬೇಕಾಗುವುದು.

(3) ಸಾರ್ವಜನಿಕ ಅಥವಾ ಖಾಸಗಿ ಸ್ವತ್ತಿಗೆ ಯಾವುದೇ ಹಾನಿ ಉಂಟಾದರೆ ಅದನ್ನು ನಷ್ಟಭರ್ತಿ ಮಾಡಲು (indemnify) ಆಯೋಜಕರು ಬದ್ಧರಾಗಿರತಕ್ಕದ್ದು ಮತ್ತು ಜನಸಂದಣಿಯ ವಿಪತ್ತಿನಿಂದಾಗಿ ಮಾನವ ಪ್ರಾಣಹಾನಿಯನ್ನು ಒಳಗೊಂಡಂತೆ ಸಂಭವಿಸುವ ಯಾವುದೇ ಕಾನೂನುಬಾಹಿರ ಘಟನೆಗೆ ಹೊಣೆಗಾರರಾಗಿರತಕ್ಕದ್ದು.

6. ಜನಸಂದಣಿ ನಿರ್ವಹಣೆ.- ಅನುಮತಿ ನೀಡುವ ಪ್ರಾಧಿಕಾರಿಯು,-

(ಎ) ಆಯೋಜಕರಿಂದ ಲಿಖಿತ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಆಯೋಜಕರ ವಿವರಗಳು, ನಿರೀಕ್ಷಿತ ಜನಸಂದಣಿಯ ಗುಂಪುಗೂಡುವಿಕೆ, ಕಾರ್ಯಕ್ರಮಗಳು ಮತ್ತು ಸಮಾರಂಭಗಳ ಉದ್ದೇಶ, ಜನಸಂದಣಿಯ ಸುರಕ್ಷತೆಗಾಗಿ ಕ್ರಮಗಳು ಹಾಗೂ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಲೋಕೋಪಯೋಗಿ ಇಲಾಖೆ, ಪೊಲೀಸ್ (ಸಂಚಾರಿ) ಇಲಾಖೆ, ಮುಂತಾದ ಇತರ ಇಲಾಖೆಗಳಿಂದ ಪಡೆದ ನಿರಾಕ್ಷೇಪಣಾ ಪ್ರಮಾಣಪತ್ರದ ಕುರಿತು ವಿಚಾರಣೆಯನ್ನು ನಡೆಸತಕ್ಕದ್ದು.

(ಬಿ) ಕಾರ್ಯಕ್ರಮ ಅಥವಾ ಸಮಾರಂಭದ ಸ್ಥಳಗಳನ್ನು ಹಾಗೂ ಕಾರ್ಯಕ್ರಮ ಅಥವಾ ಸಮಾರಂಭದ ಪ್ರವೇಶ ಮತ್ತು ನಿರ್ಗಮನ ಜಾಗಗಳನ್ನು ಒಳಗೊಂಡಂತೆ ಜನಸಂದಣಿಯನ್ನು ನಿಯಂತ್ರಿಸುವ ಮತ್ತು ನಿರ್ವಹಿಸುವ ಕಾರ್ಯಸಾಧ್ಯತೆಯನ್ನು ಪರಿಶೀಲಿಸತಕ್ಕದ್ದು.

(ಸಿ) ಜನಸಂದಣಿಯ ಸುರಕ್ಷತೆ ಹಾಗೂ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ಇತರ ಪರಿಶೀಲನೆಗಳು ಮತ್ತು ತಪಾಸಣೆಗಳನ್ನು ಮಾಡತಕ್ಕದ್ದು.

(ಡಿ) ಅಂಥ ಅರ್ಜಿಯ ದಿನಾಂಕದಿಂದ ನಾಲ್ಕು ದಿನಗಳೊಳಗಾಗಿ ಕಾರ್ಯಕ್ರಮ ಅಥವಾ ಸಮಾರಂಭವನ್ನು ಅನುಮತಿಸುವ ಅಥವಾ ಅನುಮತಿಸದಿರುವ ಕುರಿತು ಪ್ರಾಧಿಕಾರಿಯು ನಿರ್ಧಾರವನ್ನು ಕೈಗೊಳ್ಳತಕ್ಕದ್ದು.

(ಇ) ಕಾರ್ಯಕ್ರಮ ಅಥವಾ ಸಮಾರಂಭವನ್ನು ಆಯೋಜಿಸುವುದಕ್ಕೆ ಅನುಮತಿಯನ್ನು ನೀಡಲು ಸಾಧ್ಯವಿಲ್ಲ ಎಂದು ಪ್ರಾಧಿಕಾರಿಯು ನಿರ್ಧರಿಸಿದರೆ, ಅಂಥ ಆದೇಶವು ಕಾರಣಗಳನ್ನು ಆಧರಿಸಿರತಕ್ಕದ್ದು ಮತ್ತು ಆಯೋಜಕರಿಗೆ ಲಿಖಿತವಾಗಿ ಅಥವಾ ವಿದ್ಯುನ್ಮಾನ ವಿಧಾನದ ಮೂಲಕ ತಿಳಿಸತಕ್ಕದ್ದು.

(ಎಫ್) ಪ್ರಾಧಿಕಾರಿಯು ಅನುಮತಿಯನ್ನು ನೀಡಲು ನಿರ್ಧರಿಸಿದರೆ, ಆಗ ಆಯೋಜಕರು ಹಾಗೂ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಲೋಕೋಪಯೋಗಿ ಇಲಾಖೆ, ಪೊಲೀಸ್ (ಸಂಚಾರಿ) ಇಲಾಖೆ, ಮುಂತಾದ ಇತರ ಇಲಾಖೆಗಳೊಂದಿಗೆ ಪೂರ್ವ ಭದ್ರತಾ ಸಭೆಗಳನ್ನು ನಡೆಸತಕ್ಕದ್ದು ಮತ್ತು ಸಂಬಂಧಪಟ್ಟ ಪ್ರತಿಯೊಂದು ಇಲಾಖೆಗಳ ಪಾತ್ರ ಮತ್ತು ಜವಾಬ್ದಾರಿಯನ್ನು ನಿಗದಿಪಡಿಸತಕ್ಕದ್ದು. ಅದರನುಸಾರ, ಆತನು ಬಂದೋಬಸ್ತ್ ಯೋಜನೆ ಅಥವಾ ಭದ್ರತಾ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅಂಥ ಸಭೆಯ ದಿನಾಂಕದಿಂದ ಎರಡು ದಿನಗಳೊಳಗಾಗಿ ಅದನ್ನು ಆತನ ಮೇಲಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

(ಜಿ) ಪ್ರಾಧಿಕಾರಿಯಿಂದ ಅನುಮತಿಯನ್ನು ಪಡೆಯುವ ಸಂದರ್ಭದಲ್ಲಿ, ಆಯೋಜಕರು ಒಂದು ಕೋಟಿ ರೂಪಾಯಿ ಮೌಲ್ಯದ ನಷ್ಟಭರ್ತಿ ಬಾಂಡ್-ಅನ್ನು (indemnity bond) ಬರೆದುಕೊಡತಕ್ಕದ್ದು.

(ಎಚ್) ಕಾರ್ಯಕ್ರಮ ಅಥವಾ ಸಮಾರಂಭದ ದಿನಾಂಕದಂದು, ಜನಸಂದಣಿ ನಿಯಂತ್ರಣ ಮತ್ತು ನಿರ್ವಹಣೆಗಾಗಿ ಬಂದೋಬಸ್ತ್ ಯೋಜನೆಯ ಅನುಸರಣೆಯನ್ನು ಪ್ರಾಧಿಕಾರಿ ಮತ್ತು ಆಯೋಜಕರು ಖಚಿತಪಡಿಸಿಕೊಳ್ಳತಕ್ಕದ್ದು.

(ಐ) ತುರ್ತು ಪರಿಸ್ಥಿತಿಗಳು ಅಥವಾ ಅನಿರೀಕ್ಷಿತ ಬೆಳವಣಿಗೆಗಳ ಸಂದರ್ಭದಲ್ಲಿ, ನೀಡಲಾದ ಅನುಮತಿಯನ್ನು ರದ್ದುಗೊಳಿಸಲು ಅಥವಾ ನಡೆಯುತ್ತಿರುವ ಕಾರ್ಯಕ್ರಮ ಅಥವಾ ಸಮಾರಂಭವನ್ನು ತಡೆಹಿಡಿಯಲು ಪ್ರಾಧಿಕಾರಿಯು ಸೂಕ್ತ ನಿರ್ಧಾರವನ್ನು ಕೈಗೊಳ್ಳಬಹುದು.

(ಜೆ) ಕಾನೂನು ಮತ್ತು ಸುವ್ಯವಸ್ಥೆಯ ನಿರ್ವಹಣೆ, ಜನಸಂದಣಿಯ ಸುರಕ್ಷತೆ ಅಥವಾ ಜನ ಗುಂಪುಗೂಡುವಿಕೆಗಾಗಿ ಪ್ರಾಧಿಕಾರಿಯು ಸೂಕ್ತವೆಂದು ಭಾವಿಸುವ ಎಲ್ಲಾ ಇತರ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

7. ಅನುಮತಿ ಪಡೆಯದ ಕಾರ್ಯಕ್ರಮಗಳು ಅಥವಾ ಸಮಾರಂಭಗಳ ಆಯೋಜನೆಗಾಗಿ ಶಿಕ್ಷೆ.- ಯಾವುದೇ ಅನುಮತಿ ಪಡೆಯದೆ ಕಾರ್ಯಕ್ರಮ ಅಥವಾ ಸಮಾರಂಭವನ್ನು ಯಾರಾದರೂ ಆಯೋಜಿಸಿದಲ್ಲಿ ಅಥವಾ ಆಯೋಜಿಸಲು ಪ್ರಯತ್ನಿಸಿದಲ್ಲಿ ಅಥವಾ ದುಷ್ಪ್ರೇರಣೆ ಮಾಡಿದಲ್ಲಿ, ಕನಿಷ್ಠ ಮೂರು ವರ್ಷಗಳು ಮತ್ತು ಏಳು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಕೋಟಿ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

8. ನಾಗರಿಕ ತೊಂದರೆಗಾಗಿ ಶಿಕ್ಷೆ.- ಸುಳ್ಳು ವದಂತಿಗಳು, ಹೇಳಿಕೆಗಳು, ಕೃತ್ಯಗಳನ್ನು ಸೃಷ್ಟಿಸುವ ಮೂಲಕ ಅಥವಾ ಸಾಮೂಹಿಕ ಹಿಂಸಾಚಾರದ ಬೆದರಿಕೆ, ಸ್ವತ್ತಿನ ನಾಶ ಅಥವಾ ಇತರ ಕಾನೂನುಬಾಹಿರ ಕೃತ್ಯಗಳನ್ನು ಒಳಗೊಂಡಂತೆ ಯಾವುದೇ ಶಾಂತಿ ಭಂಗವನ್ನು ಉಂಟುಮಾಡುವ ಮೂಲಕ ಯಾವುದೇ ಕಾರ್ಯಕ್ರಮ ಅಥವಾ ಸಮಾರಂಭದಲ್ಲಿ ಕ್ರಮಬದ್ಧ ಜನಸಂದಣಿಗೆ

ತೊಂದರೆಯುಂಟು ಮಾಡುವ ಅಥವಾ ತೊಂದರೆಯುಂಟು ಮಾಡಲು ಪ್ರಯತ್ನಿಸುವ ಅಥವಾ ತೊಂದರೆಯುಂಟು ಮಾಡಲು ದುಷ್ಪ್ರೇರಿಸುವ ಯಾರಾದರೂ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐವತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

9. ಜನಸಂದಣಿಯ ವಿಪತ್ತಿಗಾಗಿ ಶಿಕ್ಷೆ.- ಜನಸಂದಣಿ ವಿಪತ್ತಿಗೆ ಕಾರಣರಾಗುವ ಅಥವಾ ಕಾರಣರಾದ ಯಾರಾದರೂ, ಅಂಥ ಜನಸಂದಣಿ ವಿಪತ್ತಿನ ನಿಕಟ ಪೂರ್ವದಲ್ಲಿ, ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ಕೃತ್ಯ, ನಿರ್ಲಕ್ಷ್ಯ ಅಥವಾ ಅಜಾಗರೂಕತೆಯು ಸ್ವತ್ತು ಅಥವಾ ಜೀವಹಾನಿಗೆ ಕಾರಣವಾದರೆ, ಆತನ ವಿರುದ್ಧವಾಗಿ ಸಾಬೀತಾಗದ ಹೊರತು, ಜನಸಂದಣಿ ವಿಪತ್ತನ್ನು ಮಾಡಿದ್ದಾನೆಂದು ಪರಿಗಣಿಸತಕ್ಕದ್ದು ಹಾಗೂ ದೈಹಿಕಗಾಯಗಳಿಗಾಗಿ ಕನಿಷ್ಠ ಮೂರು ವರ್ಷಗಳು ಮತ್ತು ಏಳು ವರ್ಷಗಳವರೆಗಿನ ಕಾರಾವಾಸದ ಹಾಗೂ ಪ್ರಾಣಹಾನಿ ಪ್ರಕರಣಗಳಿಗೆ ಕನಿಷ್ಠ ಹತ್ತು ವರ್ಷಗಳಿಂದ ಜೀವಾವಧಿ ಶಿಕ್ಷೆಗೆ ಗುರಿಯಾಗತಕ್ಕದ್ದು.

10. ಪೊಲೀಸರ ನಿರ್ದೇಶನವನ್ನು ಪಾಲಿಸದಿರುವುದಕ್ಕಾಗಿ ಶಿಕ್ಷೆ.- ಗುಂಪುಗೂಡಿದ ಸ್ಥಳದಿಂದ ಚದುರಿಸಲು ಕರ್ತವ್ಯದಲ್ಲಿರುವ ಪೊಲೀಸ್ ಸಬ್-ಇನ್‌ಸ್ಪೆಕ್ಟರ್ ದರ್ಜೆಯ ಮತ್ತು ಅದಕ್ಕಿಂತ ಮೇಲಿನ ದರ್ಜೆಯ ಯಾರೇ ಪೊಲೀಸ್ ಅಧಿಕಾರಿಯ ಕಾನೂನುಬದ್ಧ ನಿರ್ದೇಶನಗಳನ್ನು ಪಾಲಿಸದಿರುವ ಅಥವಾ ಉಲ್ಲಂಘಿಸಲು ದುಷ್ಪ್ರೇರಿಸುವ ಯಾರಾದರೂ, ಒಂದು ತಿಂಗಳ ಅವಧಿಗೆ ಸಮುದಾಯ ಸೇವೆಯನ್ನು ಒಳಗೊಂಡಂತೆ ಐವತ್ತು ಸಾವಿರ ರೂಪಾಯಿಗಳ ಜುಲ್ಮಾನೆಗೆ ಗುರಿಯಾಗತಕ್ಕದ್ದು.

11. ಅಪರಾಧದ ವರ್ಗೀಕರಣ.- ಈ ಅಧಿನಿಯಮದಡಿಯಲ್ಲಿನ ಅಪರಾಧಗಳು ಸಂಜ್ಞೇಯ, ಜಾಮೀನು ರಹಿತ ಮತ್ತು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರಿಂದ ಅಧಿವಿಚಾರಣೆಗೆ ಒಳಪಡತಕ್ಕದ್ದು. ಆದರೆ ಪ್ರಕರಣ 9ರಡಿಯಲ್ಲಿನ ಅಪರಾಧವನ್ನು ಸೆಷನ್ ನ್ಯಾಯಾಲಯವು ಅಧಿವಿಚಾರಣೆಗೆ ಒಳಪಡಿಸತಕ್ಕದ್ದು.

12. ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ, 2023ರ ಅಧ್ಯಾಯ XIರ ಅನ್ವಯ.- ಈ ಅಧಿನಿಯಮದಲ್ಲಿರುವುದಾವುದೂ, ಕಾರ್ಯನಿರ್ವಾಹಕ ದಂಡಾಧಿಕಾರಿ (magistrate) ಅಥವಾ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ದರ್ಜೆಯ ಮತ್ತು ಅದಕ್ಕಿಂತ ಮೇಲಿನ ಪೊಲೀಸ್ ಅಧಿಕಾರಿಯು, ಜನಸಂದಣಿಯ ನಿಯಂತ್ರಣ ಮತ್ತು ನಿರ್ವಹಣೆಯ ಸಮಯದಲ್ಲಿ ಸಾರ್ವಜನಿಕ ಸುವ್ಯವಸ್ಥೆ ಮತ್ತು ಶಾಂತಿ ಕಾಪಾಡಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 46)ರ ಅಧ್ಯಾಯ XIರಡಿಯಲ್ಲಿ ಅಧಿಕಾರ ಚಲಾಯಿಸುವುದನ್ನು ನಿರ್ಬಂಧಿಸತಕ್ಕದ್ದಲ್ಲ.

13. ಕರ್ನಾಟಕ ಪೊಲೀಸು ಅಧಿನಿಯಮ, 1963ರ ಅನ್ವಯ.- ಈ ಅಧಿನಿಯಮದಲ್ಲಿರುವುದಾವುದೂ, ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಪೊಲೀಸ್ ಅಧಿಕಾರಿಯು ಕರ್ನಾಟಕ ಪೊಲೀಸು ಅಧಿನಿಯಮ, 1963 (1964ರ ಕರ್ನಾಟಕ ಅದಿನಿಯಮ 4)ರಡಿಯಲ್ಲಿ, ಅಂದರೆ ಸಾರ್ವಜನಿಕ ಸ್ಥಳಗಳಲ್ಲಿ ಸಂಚಾರ ನಿಯಂತ್ರಣ ಮತ್ತು ಸುವ್ಯವಸ್ಥೆ ಸಂರಕ್ಷಣೆಗಾಗಿ ಆದೇಶಗಳನ್ನು ನೀಡುವ ಅಧಿಕಾರ ಮುಂತಾದ ಅಧಿಕಾರ ಚಲಾಯಿಸುವುದನ್ನು ನಿರ್ಬಂಧಿಸತಕ್ಕದ್ದಲ್ಲ.

14. ಇತರ ಕಾನೂನುಗಳ ಅನ್ವಯವನ್ನು ಪ್ರತಿಷೇಧಿಸದಿರುವುದು (barred).- ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳ ಜೊತೆಗಿರತಕ್ಕದ್ದು ಮತ್ತು ಅವುಗಳನ್ನು ಅಲ್ಪೀಕರಿಸತಕ್ಕದ್ದಲ್ಲ.

15. ನಷ್ಟ ಅಥವಾ ಹಾನಿಗಾಗಿ ಪರಿಹಾರ ನೀಡುವ ಹೊಣೆಗಾರಿಕೆ.- (1) ಯಾವುದೇ ನಾಗರಿಕ ತೊಂದರೆ ಅಥವಾ ಜನಸಂದಣಿ ವಿಪತ್ತಿನಲ್ಲಿ ಸಾರ್ವಜನಿಕ ಅಥವಾ ಖಾಸಗಿ ಸ್ವತ್ತು ಅಥವಾ

ಸ್ವತ್ತುಗಳು ಹಾನಿಗೊಳಗಾದರೆ ಅಥವಾ ನಷ್ಟಕ್ಕೊಳಗಾದರೆ ಅಥವಾ ಯಾವುದೇ ಮಾನವ ಪ್ರಾಣಹಾನಿಯಾದರೆ, ಆಯೋಜಕರು ನಷ್ಟವನ್ನು ಸರಿದೂಗಿಸಲು ಪ್ರತ್ಯೇಕವಾಗಿ ಮತ್ತು ಜಂಟಿಯಾಗಿ ಹೊಣೆಗಾರರಾಗಿರತಕ್ಕದ್ದು. ಅಧಿವಿಚಾರಣಾ ನ್ಯಾಯಾಲಯವು ಸಂತ್ರಸ್ತರಿಗೆ ಹಾನಿ ಅಥವಾ ನಷ್ಟಪರಿಹಾರವನ್ನು ಲೆಕ್ಕಹಾಕತಕ್ಕದ್ದು ಮತ್ತು ಐತೀರ್ಪು ನೀಡತಕ್ಕದ್ದು.

(2) ಅಧಿವಿಚಾರಣಾ ನ್ಯಾಯಾಲಯದ ಆದೇಶದ ಅನುಸಾರ ಸಂತ್ರಸ್ತರಿಗೆ ಪರಿಹಾರೋತ್ಪತ್ತಿಗಳನ್ನು ವಿತರಿಸಲು, ಅಪರಾಧ ನಿರ್ಣೀತರಾದ ಆಯೋಜಕರ ಸ್ವತ್ತು ಅಥವಾ ಸ್ವತ್ತುಗಳು ಜಪ್ತಿ ಮಾಡಿಕೊಳ್ಳಲು ಮತ್ತು ಅದನ್ನು ನಗದೀಕರಿಸಲು ಗುರಿಯಾಗತಕ್ಕದ್ದು.

16. ಇತರ ಅಧಿನಿಯಮಗಳ ಅನ್ವಯ.- ಭಾರತೀಯ ನ್ಯಾಯ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 45), ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 46), ಕರ್ನಾಟಕ ಪೊಲೀಸು ಅಧಿನಿಯಮ, 1963 (1964ರ ಕರ್ನಾಟಕ ಅಧಿನಿಯಮ 4), ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 (2000ರ ಕೇಂದ್ರ ಅಧಿನಿಯಮ 21)ರಲ್ಲಿರುವ ಪದಾವಳಿಗಳ ಪರಿಭಾಷೆಗಳು ಈ ಅಧಿನಿಯಮಕ್ಕೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

17. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.- ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುದೇ ನಿಯಮ ಅಥವಾ ಆದೇಶದ ಪಾಲನೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಯಾರೇ ಸರ್ಕಾರಿ ನೌಕರರ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

18. ತೊಂದರೆಗಳನ್ನು ನಿವಾರಿಸುವ ಅಧಿಕಾರ.- ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ರಾಜ್ಯ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಅಂಥ ತೊಂದರೆಗಳನ್ನು ನಿವಾರಿಸಲು ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಮುಕ್ತಾಯಗೊಂಡ ತರುವಾಯ ಈ ಪ್ರಕರಣದಡಿ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

19. ನಿಯಮಗಳ ರಚನಾಧಿಕಾರ.-(1) ರಾಜ್ಯ ಸರ್ಕಾರವು, ಪೂರ್ವ ಪ್ರಕಟಣೆಯ ತರುವಾಯ, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮ ಅಥವಾ ಅಧಿಸೂಚನೆಯನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಟ್ಟು ಮೂವತ್ತು ದಿನಗಳಿಗಾಗಿ ಒಳಗೊಂಡಿರಬಹುದಾದ ಒಂದು ಅಥವಾ ಎರಡು ಅಥವಾ ಹೆಚ್ಚಿನ ನಿಕಟೋತ್ತರ ಅಧಿವೇಶನಗಳಲ್ಲಿ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಟುಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಅಂಥ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದತಿಯು ಆ

ನಿಯಮದ ಅಥವಾ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

20. ಈ ಅಧಿನಿಯಮದ ಅನ್ವಯಿಸದಿರುವಿಕೆ.- ಈ ಅಧಿನಿಯಮದ ಉಪಬಂಧಗಳು ಖಾಸಗಿ ಆವರಣಗಳೊಳಗೆ ಆಚರಿಸುವ ಅಥವಾ ನಡೆಸುವ ಕೌಟುಂಬಿಕ ಸಮಾರಂಭಗಳು ಅಥವಾ ಕಾರ್ಯಕ್ರಮಗಳಾದ ಮದುವೆ ಮುಂತಾದವುಗಳಿಗೆ ಅನ್ವಯವಾಗುವುದಿಲ್ಲ.

ವಿವರಣೆ: ಖಾಸಗಿ ಆವರಣಗಳು ಎಂಬುದು ಭೋಗ್ಯಕ್ಕೆ ಪಡೆದ, ಬಾಡಿಗೆಗೆ ಪಡೆದ ಅಥವಾ ಗುತ್ತಿಗೆಪಡೆದ ಆವರಣಗಳನ್ನು ಒಳಗೊಳ್ಳುವುದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗಾಗಿ ಹೊಸ ಶಾಸನವನ್ನು ರಚಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ,-

(i) ಕಾರ್ಯಕ್ರಮಗಳು ಮತ್ತು ಸಮಾರಂಭಗಳಲ್ಲಿ ಜನಸಂದಣಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವುದು ಮತ್ತು ಜನ ಗುಂಪುಗೂಡುವುದನ್ನು ನಿರ್ವಹಿಸುವುದು; ಮತ್ತು

(ii) ಕಾನೂನುಬಾಹಿರವಾಗಿ ಗುಂಪುಗೂಡುವುದನ್ನು ಪ್ರತಿಬಂಧಿಸುವುದು.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

ಖಂಡ-19	19ನೇ ಖಂಡವು ಅಧಿನಿಯಮದ ಉದ್ದೇಶಗಳನ್ನು ಈಡೇರಿಸಲು ಪೂರ್ವ ಪ್ರಕಟಣೆಯ ತರುವಾಯ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ;

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಡಾ. ಜಿ. ಪರಮೇಶ್ವರ
ಗೃಹ ಮಂತ್ರಿ

ಎಂ.ಕೆ. ವಿಶಾಲಾಕ್ಷಿ
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

SIXTEENTH LEGISLATIVE ASSEMBLY

SEVENTH SESSION

THE KARNATAKA CROWD CONTROL (MANAGING CROWD AT EVENTS AND PLACE OF GATHERING) BILL, 2025

(LA Bill No. 63 of 2025)

A Bill to effectively control the crowd and manage mass gathering at events and functions, to prevent unlawful gatherings and to provide provisions for punishment to the offences;

Whereas it is expedient to effectively control the crowd and manage mass gathering at events and functions, to prevent unlawful gatherings and to provide provisions for punishment to the offences and for the matters connected therewith or incidental thereto;

Be it enacted by the Karnataka State Legislature in the Seventy-sixth year of the Republic of India as follows:-

1. Short title and commencement.- (1) This Act may be called the Karnataka Crowd Control (Managing Crowd at Events and place of Gathering) Act, 2025.

(2) It shall come into force on such date as the State Government may, by notification in the Official Gazette, appoint.

2. Definitions.- In this Act, unless the context otherwise requires,-

(i) **"Application"** means the requisition in the prescribed format as notified by the Government of Karnataka;

(ii) **"Civil Disturbance"** means and includes, gathering of people that constitutes a breach of peace or any assembly of persons where there is a threat of collective violence, destruction of property, or other unlawful act;

(iii) **"Crowd"** means and includes, a group of five thousand or more people that have gathered for a common purpose or intent;

(iv) **"Crowd Control"** means and includes, the methods, procedures and techniques used by the Law Enforcement Agencies to maintain law and order.

Explanation: For the purpose of this clause, crowd control includes, the acts of show of force, crowd containment, dispersal tactics and preparations for multiple arrests;

(v) **"Crowd Management"** means and includes techniques used to manage lawful assemblies before, during, and after the event for the purpose of maintaining lawful status through event planning, pre-event contact with event organizers, issuance of permits when applicable, information gathering, and other means;

(vi) **"Crowd disaster"** means and includes, crowd crush due to surge of individuals in a crowd, in response to a perceived danger or loss of physical space or disruption in the orderly movement of crowds resulting in irrational and dangerous movements for self-protection leading to injuries and fatalities;

(vii) **"Function or event"** means and includes, be called in whatever name, for congregation of a large number of people for a common purpose, at a particular place of gathering, to meet that common purpose;

(viii) **"Organisers"** means and includes a person or group of persons or company which intends to organize such event or function.

Explanation: For the purpose of this clause, "Company" means an association of persons whether registered under prevailing laws or not; and

(ix) **"Place of gathering"** means and includes either an open or closed area wherein the intended event or function is permitted to be organised by the Authority.

3. Authority for crowd control and management.- The Police Officers of and above the rank of Officer in-charge of Police Station are the Authority for crowd controlling and management within their respective jurisdictions.

4. Permission to organise events or functions.-Whoever intends to organise any event or function which would attract mass gathering or a crowd, shall have to obtain permission from the jurisdictional Authority,-

(a) When the crowd is less than seven thousand, the Officer in-charge of the Police Station, may grant permission upon application from the organisers, after due enquiry.

(b) When the crowd is more than seven thousand, but less than fifty thousand, the Deputy Superintendent of Police of the jurisdiction, may grant permission upon application from the organisers, after due enquiry.

(c) When the crowd is more than fifty thousand, the jurisdictional Superintendent of Police or the Commissioner of Police, may grant permission upon application from the organisers, after due enquiry.

5. Application for permission.-(1) The organisers of the event or function shall apply for permission in writing to the Authority ten days prior to the intended event or function with full particulars of the event or function.

(2) The organisers need to provide the measures adopted for smooth movement of the gathered crowd in and outside the place of such events.

(3) The organisers shall undertake to indemnify any loss, if caused to public or private property and be liable for any unlawful incident which occurs including loss of human life due to crowd disaster.

6. Crowd Management.-The permitting Authority,-

(a) upon receipt of the written application by the organisers, shall conduct an enquiry about the details of the organisers, expected crowd gathering, purpose of functions and events, measures for crowd safety and no objection certificate from other departments like Fire Safety and Emergency Services, Health and Family Welfare, Public Works, Police (Traffic), etc.,

(b) to verify the place of event or function and feasibility of controlling and managing the crowd, including entry and exit points of the place of event or function.

(c) to do other verifications and examinations for safety of the crowd and for maintaining law and order.

(d) the Authority shall take the decision regarding permitting or not permitting the event or function within four days from the date of such application.

(e) if the Authority decides that, permission could not be granted to organise the event or function, such an order shall be based on reasons and shall be communicated to the organiser by written or electronic mode.

(f) if the Authority decides to grant the permission, then it shall hold prior security meetings with organiser and other departments like Fire Safety and Emergency Services, Health and Family Welfare, Public Works, Health, Police (Traffic), etc., and fix the role and responsibility of each concerned. Accordingly, he shall prepare a scheme of bandobast or plan of security and submit the same to his superior officers within two days from the date of such meeting.

(g) the organisers shall have to execute the Indemnity Bond worth of rupees one Crore at the time of obtaining permission from the Authority.

(h) that, on the date of event or function, the Authority and organisers shall ensure compliance of the bandobast scheme for crowd control and management.

(i) in case of exigencies or unexpected developments, the Authority may take a suitable decision for cancellation of the permission granted or withhold the ongoing event or function.

(j) shall take all other steps for maintenance of law and order, safety of the crowd or mass gathering which the Authority deems fit.

7. Punishment for organizing unpermitted events or functions.- Whoever organises or attempts or abets to organise any unpermitted event or

function shall be punished with imprisonment for a term which may extend to minimum three years and up to seven years or with fine up to rupees one Crore or both.

8. Punishment for civil disturbance.- Whoever disturbs or attempts to disturb or abets to disturb the orderly crowd in any event or function by way of creating false rumours, statements, acts or causing any breach of peace including a threat of collective violence, destruction of property, or other unlawful acts shall be punishable with imprisonment for a term which may extend to three years or with fine of rupees fifty thousand or both.

9. Punishment for crowd disaster.- Whoever causes or is a reason for crowd disaster, if it is shown that, immediately prior to such crowd disaster, the act, negligence or recklessness of such a person or persons, led to loss of property or life, unless the contrary is proved, be deemed to have committed crowd disaster and liable for imprisonment to a minimum three years and up to seven years for injuries and imprisonment to a minimum of ten years up to life sentence for fatalities.

10. Punishment for disobedience of direction of Police.-Whoever disobeys or abets to disobey lawful directions of any Police Officer, of and above the rank of Sub-Inspector of Police, on duty, to disperse from the place of gathering shall be liable to a fine of rupees fifty thousand including, community service for a period of one month.

11. Classification of offence.- Offences under this Act are cognizable, non-bailable and triable by the Judicial Magistrate First Class. But the Offence under section 9 is triable by the Court of Session.

12. Application of Chapter XI of Bharatiya Nagarik Suraksha Sanhita, 2023.- Nothing in this Act, prevents the Executive Magistrate or Police Officer, of and above the rank of Sub-Inspector of Police, to exercise the power under Chapter XI Bharatiya Nagarik Suraksha Sanhita, 2023 (Central Act 46 of 2023) to ensure maintenance of public order and tranquility during crowd control and management.

13. Application of the Karnataka Police Act, 1963.- Nothing in this Act prevents the District Magistrate or Police Officer to exercise power under the Karnataka Police Act, 1963(Karnataka Act 4 of 1964) i.e. the power to make orders for regulation of traffic and for preservation of order in public places, etc.

14. Application of other laws not barred.- The provisions of this Act shall be in addition to, and not in derogation of, the provisions of any other law for the time being in force.

15. Liability to compensate for loss or damage.-(1) If any property or properties either public or private, is damaged or destroyed or any human life is lost, in any civil disturbance or crowd disaster, the organisers are severally and

jointly liable to compensate the loss. The trial Court shall calculate and award the damages or compensation to the victims.

(2) The property or properties of the convicted organisers, are liable to be attached and realised to distribute the proceeds to the victims as per the orders of the trial court.

16.Application of other Acts.- The definitions of the terms in Bharatiya Nyaya Sanhita, 2023 (Central Act 45 of 2023), Bharatiya Nagarika Suraksha Sanhita, 2023 (Central Act 46 of 2023), the Karnataka Police Act, 1963(Karnataka Act 4 of 1964), the Information Technology Act, 2000(Central Act 21 of 2000)are mutatis mutandis applicable to this Act.

17.Protection of action taken in good faith.-No suit, prosecution or other legal proceedings shall lie against public servants for anything which is done in good faith or intended to be done under this Act, or the rules made thereunder.

18.Power to remove difficulties.-If any difficulty arises in giving effect to the provisions of this Act, the State Government may, by order published in the Official Gazette, make provisions to remove such difficulty,

Provided that, no such order shall be made under this section after the expiry of three years from the commencement of this Act.

19.Power to make rules.-(1) The State Government may, after previous publication make rules to carry out the purposes of this Act.

(2) Every rule made this Act shall be laid as soon as may be after it is made before each House of State Legislature it is in session for a period of thirty days which may be comprised in one session or in two or more successive session and if before the expiry of the session immediately following the session or the successive sessions aforesaid both Houses agree in making any notification in the rules or both Houses agree that the rule should not be made, the rule shall thereafter shall have affect only in such modified form or be of no effect as the case may be, however, any such notification or amendment shall be without prejudice to the validity of anything previously done under that rule.

20.Non application of this Act.-The provisions of thisAct are not applicable to the family functions or events, such as marriage etc., which are performed or held within private premises.

Explanation: Private premises include leased, hired or contracted premises.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

STATEMENT OF OBJECTS AND REASONS

It is considered necessary to make a new legislation to,-

(i) effectively control the crowd and manage mass gathering at events and functions; and
(ii) prevent unlawful gathering.

Hence, the Bill.

FINANCIAL MEMORANDUM

There is no extra expenditure involved in the proposed legislative measure at this stage.

MEMORANDUM REGARDING DELEGATED LEGISLATION

Clause:19	Clause -19 empowers the State Government to make rules after previous publication to carry out the purposes of the Act.

The proposed delegation of legislative power is normal in character.

Dr. G. PARAMESHWARA
Minister for Home

M.K. VISHALAKSHI
Secretary
Karnataka Legislative Assembly

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH